# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 531 |
| ಸದಸ್ಯರ ಹೆಸರು | ಶ್ರೀ ಆಯನೂರು ಮಂಜುನಾಥ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 13-12-2018 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ಸರ್ಕಾರಿ ಮತ್ತು ಖಾಸಗಿ ಶಾಲೆಗಳನ್ನು ಪ್ರಾರಂಭಿಸಲು ಇರುವ ಸರ್ಕಾರದ ನಿಯಮಗಳೇನು;</td><td><u>ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ( 1 ರಿಂದ 5 ನೇ ತರಗತಿ)</u><br>• ಒಂದು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಕಿರಿಯ ಪ್ರಾಥಮಿಕ ಶಾಲೆ ಇಲ್ಲದೆ ಇರುವುದು.<br>• ಭೌಗೋಳಿಕ ಅಡೆತಡೆ ಇದ್ದಲ್ಲಿ 1 ಕಿಲೋ ಮೀಟರ್ ನಿಯಮಕ್ಕೆ ಸಡಿಲಿಕೆ ಇದೆ<br>• ಜನವಸತಿ ಪ್ರದೇಶದಲ್ಲಿ 100 ರಿಂದ 200 ಜನಸಂಖ್ಯೆ ಇರುವುದು<br><br><u>ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಗೆ (6 ರಿಂದ 7ನೇ ತರಗತಿ) ಉನ್ನತೀಕರಣ.</u><br>• ಮೂರು ಕಿಲೋಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಹಿರಿಯ ಪ್ರಾಥಮಿಕ ಶಾಲೆ ಇಲ್ಲದೆ ಇರುವುದು.<br>• ಭೌಗೋಳಿಕ ಅಡೆತಡೆ ಇದ್ದಲ್ಲಿ ಮೂರು ಕಿಲೋಮೀಟರ್ ನಿಯಮಕ್ಕೆ ಸಡಿಲಿಕೆ ಇದೆ.<br><br><u>ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 8 ನೇ ತರಗತಿ ಪ್ರಾರಂಭ</u><br>• 5 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಯಾವುದೇ 8 ನೇ ತರಗತಿ ಇರುವ ಶಾಲೆ ಹಿರಿಯ ಪ್ರಾಥಮಿಕ /ಪ್ರೌಢಶಾಲೆ ಇಲ್ಲದೆ ಇರುವುದು.<br>• ಭೌಗೋಳಿಕ ಅಡೆತಡೆ ಇದ್ದಲ್ಲಿ ಐದು ಕಿಲೋಮೀಟರ್ ನಿಯಮಕ್ಕೆ ಸಡಿಲಿಕೆ ಇದೆ.<br><u>ಸರ್ಕಾರಿ ಪ್ರೌಢ ಶಾಲೆ ಪ್ರಾರಂಭಿಸಲು/ಉನ್ನತೀಕರಿಸಲು</u><br>• 5 ಕಿಲೋಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಪ್ರೌಢ ಶಾಲೆ ಇಲ್ಲದೆ ಇರುವುದು.<br>• 9ನೇ ತರಗತಿಗೆ ಅಲ್ಪಸಂಖ್ಯಾಂತ ಉರ್ದು ಶಾಲೆಗಳಲ್ಲಿ 50 ಇತರೆ ಶಾಲೆಗಳಲ್ಲಿ 70 ಕ್ಕಿಂತ ಹೆಚ್ಚು ಮಕ್ಕಳು ಲಭ್ಯವಿರಬೇಕು.<br>• ಭೌಗೋಳಿಕ ಅಡೆತಡೆಗಳಿದ್ದಲ್ಲಿ 5 ಕಿಲೋ ಮೀಟರ್ ನಿಯಮಕ್ಕೆ ಸಡಿಲಿಕೆ ಇದೆ.</td></tr>
</table>

| | |
|---|---|
| | ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಸಿ7(2)ಪ್ರಾಶಿಅ/ಹೊಶಾನೋಂ. 85/2017-18 ದಿನಾಂಕ:26-03-2018ರಲ್ಲಿ ನಿಗದಿಪಡಿಸಿರುವ ಮಾರ್ಗಸೂಚಿ ನಿಯಮಗಳನ್ನು ಅನುಸರಿಸಿ ಪ್ರಾರಂಭಿಸಲಾಗುತ್ತಿದೆ.<br><br><u>ಕಿರಿಯ ಪ್ರಾಥಮಿಕ ಶಾಲೆ ( 1 ರಿಂದ 5 ನೇ ತರಗತಿ)</u><br>1. ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಕಿರಿಯ ಪ್ರಾಥಮಿಕ ಶಾಲೆ ಇಲ್ಲದೆ ಇರುವುದು.<br><br>**<u>ಖಾಸಗಿ ಅನುದಾನ ರಹಿತ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಇರುವ ಸರ್ಕಾರದ ನಿಯಮಗಳ ವಿವರ.</u>**<br><br>1. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.709.ಪಿಜಿಸಿ.2017, ದಿನಾಂಕ:7-3-2018ರಲ್ಲಿ ನಿಯಮಗಳನ್ನು ತಿದ್ದುಪಡಿಗೊಳಿಸಿದ್ದು ಅದರಂತೆ ಪ್ರತಿ ವರ್ಷ ನವೆಂಬರ್-30 ರ ಒಳಗಾಗಿ ಅರ್ಹ ಆಡಳಿತ ಮಂಡಳಿಗಳು ಖಾಸಗಿ ಶಾಲೆಯನ್ನು ಪ್ರಾರಂಭಿಸಲು ಇಚ್ಚಿಸಿದ್ದಲ್ಲಿ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಬೇಕಾಗಿರುತ್ತದೆ.<br>2. ಶಾಶ್ವತ ಅನುದಾನ ರಹಿತವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ನೋಂದಣಿ ನೀಡಲು 2017-18 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರೌಢಶಾಲೆಗಳನ್ನು ತೆರೆಯಲು ಅಧಿಸೂಚನೆಯಲ್ಲಿ ನಿಗದಿಪಡಿಸಲಾದ ಅಗತ್ಯ ಭೂಮಿ ಇತರೆ ಸೌಲಭ್ಯಗಳನ್ನು ಹೊಂದಿರಬೇಕು<br>➢ 2018-19 ನೇ ಸಾಲಿಗೆ ಖಾಸಗಿ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಯನ್ನು ಪ್ರಾರಂಭಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಿ7(2)ಪ್ರಾಶಿಅ/ಹೊಶಾನೋಂ 85/2017-18 ದಿನಾಂಕ: 26-03-2018ರಲ್ಲಿ ಮಾರ್ಗಸೂಚಿಗಳನ್ನು ನಿಗದಿಪಡಿಸಲಾಗಿದೆ. ಸದರಿ ಸುತ್ತೋಲೆಯಲ್ಲಿ 9 ರಿಂದ 10 ನೇ ತರಗತಿಗಳಿಗೆ ಅನುಮತಿ ವಿಚಾರದಲ್ಲಿ ಈಗಾಗಲೇ 1 ರಿಂದ 5 ಮತ್ತು 6 ರಿಂದ 8ನೇ ತರಗತಿಗಳಿಗೆ ಶಾಲೆ ಪ್ರಾರಂಭಿಸಿ ನಡೆಯುತ್ತಿದ್ದಲ್ಲಿ ಇಂತಹ ಶಾಲೆಗಳಿಗೆ ಮೂಲಭೂತ ಸೌಲಭ್ಯ ಮತ್ತು ಮಕ್ಕಳ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಿದ್ದಲ್ಲಿ ಸ್ವಾಭಾವಿಕ ಬೆಳವಣಿಗೆಯಲ್ಲಿ ಆಡಳಿತ ಮಂಡಳಿ ಮತ್ತು ಸಂಸ್ಥೆ ಇಚ್ಚಿಸಿದ್ದಲ್ಲಿ 9 ಮತ್ತು 10ನೇ ತರಗತಿಯನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ. |

| | |
|---|---|
| | ➢ ಇಲಾಖೆಯು ಹೊಸ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಅನುಮತಿ ನೀಡುವ ವಿಚಾರದಲ್ಲಿ ನೋಂದಾಯಿತ ಸಂಸ್ಥೆಗಳಿಗೆ ಅನುಮತಿ ನೀಡುವ ವಿಚಾರದಲ್ಲಿ ನೋಂದಾಯಿತ ಸಂಸ್ಥೆಗಳಿಂದ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.<br>3. ಅಗತ್ಯ ಭೂಮಿಯನ್ನು ಹೊಂದಿದಲ್ಲಿ 1 ರಿಂದ 10ನೇ ತರಗತಿವರೆಗೆ, ಎಲ್.ಕೆ.ಜಿ ಯಿಂದ 10ನೇ ತರಗತಿವರೆಗೆ ಮತ್ತು 6 ರಿಂದ 10 ನೇ ತರಗತಿವರೆಗೆ ಏಕ ಕಾಲದಲ್ಲಿ ಶಾಲೆಯನ್ನು ತೆರೆಯುವ ಪ್ರಸ್ತಾವನೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.<br>4. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು-1960ರ ಪ್ರಕಾರ ಸಂಸ್ಥೆಯನ್ನು ನೋಂದಾಯಿಸಿರಬೇಕು.<br>5. ಸಂಸ್ಥೆಯು ಟ್ರಸ್ಟ್‌ನಡಿಯಲ್ಲಿ ಆಗಿದ್ದಲ್ಲಿ Act-1882 ರ ಪ್ರಕಾರ ನೋಂದಾಯಿಸಿರಬೇಕು.<br>6. ಮಹಾನಗರಪಾಲಿಕೆ/ನಗರ/ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಯನ್ನು ಪ್ರಾರಂಭಿಸಲು ಅಗತ್ಯ ಪರಿವರ್ತಿತ ಭೂಮಿಯನ್ನು ಹೊಂದಿರಬೇಕು ಮತ್ತು ಸಂಸ್ಥೆಯ ಹೆಸರಿನಲ್ಲಿ ನೋಂದಾಯಿಸಿರಬೇಕು. ಒಂದು ವೇಳೆ ಸಂಸ್ಥೆಯು ಸ್ವಂತ ಭೂಮಿ/ಕಟ್ಟಡ ಹೊಂದದಿದ್ದಲ್ಲಿ 30 ವರ್ಷಗಳಿಗೆ ಕರಾರು ಪಡೆದು ಸಂಸ್ಥೆಯ ಹೆಸರಿನಲ್ಲಿ ನೋಂದಾಯಿಸಿರಬೇಕು.<br>7. ಹೊಸ ಶಾಲೆಯನ್ನು ಪ್ರಾರಂಭಿಸಲು ಇಚ್ಛಿಸುವ ಆಡಳಿತ ಮಂಡಳಿ ಸಂಸ್ಥೆಯವರು ನಿಗಧಿಪಡಿಸಿರುವ ನೋಂದಣಿ ಶುಲ್ಕವನ್ನು ಆನ್-ಲೈನ್ ಮೂಲಕ ಸರ್ಕಾರಕ್ಕೆ ಪಾವತಿಸಿ ಅರ್ಜಿಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.<br>ಅಗತ್ಯ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರುಗಳನ್ನು ನೇಮಕ ಮಾಡಿಕೊಳ್ಳಬೇಕು ಹಾಗೂ ಅವರುಗಳಿಗೆ ಕಡ್ಡಾಯವಾಗಿ ಸೇವಾಭದ್ರತೆಯನ್ನು ಆಡಳಿತ ಮಂಡಳಿಯವರೇ ಕಲ್ಪಿಸಬೇಕು. |
| ಆ) ಸರ್ಕಾರಿ ಶಾಲೆಗಳಿಗೆ ಮತ್ತು ಖಾಸಗಿ ಶಾಲೆಗಳಿಗೆ ಅನ್ವಯವಾಗುವ ನಿಯಮಗಳಲ್ಲಿರುವ ತಾರತಮ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಇ) ಬಂದಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು; | ಉದ್ಭವಿಸುವುದಿಲ್ಲ. |
| ಈ) ತಾರತಮ್ಯ ಸರಿಪಡಿಸುವ ಮೂಲಕ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ/ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಅನ್ವಯಿಸುವುದಿಲ್ಲ. |

**ಇಡಿ 691 ಪಿಜಿಸಿ 2018**

**(ಹೆಚ್.ಡಿ.ಕುಮಾರಸ್ವಾಮಿ)**
**ಮುಖ್ಯಮಂತ್ರಿ**